**ದಿನಾಂಕಃ 26.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀ.Hemanth ರವರಿಂದಃ**

1) ಕೆಎ**-53-**ಎಂಜೆ**-1942** ಸಂಖ್ಯೆಯ ವಾಹನಕ್ಕೆ ನಾವು ನೀಡಿರುವ ವಿಮಾ ಪಾಲಿಸಿಯು ದಿಃ **15.02.2022** ರಿಂದ **14.02.2025** ರ ವರೆಗೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಸದರಿ ವಾಹನಕ್ಕೆ ಅಂದರೆ ಕೆಎ**-53-**ಎಂಜೆ**-1942** ಸಂಖ್ಯೆಯ ಕಾರಿಗೆ ನೀಡಿರುವಂತಹ **bundled policy** ಯು ದಿಃ **15.02.2022** ರಿಂದ ದಿಃ **14.02.2023** ರ ರವರೆಗೆ **comprehensive policy** ಆಗಿದೆ ಮತ್ತು ನಂತರದ ಅವಧಿಗೆ ಕೇವಲ **liability only** ಪಾಲಿಸಿ ಆಗಿದೆ" ಎಂದು ನುಡಿದಿದ್ದಾರೆ.

2) ಈಗ ನಾನು ಹೇಳಿದಂತಹ ವಿವರಣೆಯು ನಿ.ಆರ್.**1** ಅಂದರೆ ವಿಮಾ ಪಾಲಿಸಿಯಲ್ಲಿ ನಮೂದು ಇದೆಯೋ ಹೇಗೆ ಎಂದರೆ **comprehensive** ಎಂಬ ಪದವು ಇಲ್ಲ, ಉಳಿದ ವಿವರಗಳು ಇವೆ.

3) ನಾನು ಹೇಳಿದಂತಹ ವಿವರಣೆಗಳು ನಿ.ಆರ್.**1** ದಾಖಲೆಯಲ್ಲಿ ನಮೂದು ಇರುವುದಿಲ್ಲ ಎಂದರೆ ಸುಳ್ಳು. ನಿ.ಆರ್.**1** ದಾಖಲೆಯಲ್ಲಿ **inmates of the car** ಎಂಬ ಅಡಿಯಲ್ಲಿ ನಾವು ಯಾವುದೇ **premium**

ಅನ್ನು ಪಡೆದುಕೊಂಡಿರುವುದಿಲ್ಲ.

4) ವಿಮಾ ಕಾನೂನಿನ ಪ್ರಕಾರ ವಿಮಾ ಪಾಲಿಸಿಯ ಅಡಿಯಲ್ಲಿ **insurer** ಮತ್ತು **insured** ಇಬ್ಬರನ್ನು ಹೊರತುಪಡಿಸಿದರೆ ಉಳಿದ ಎಲ್ಲರೂ **third party** ಆಗುತ್ತಾರೆ ಎಂದರೆ ಸುಳ್ಳು.

5) **Inmate of the car** ಮೂರನೇ ವ್ಯಕ್ತಿ **(third party)** ಆಗುವುದಿಲ್ಲ ಎಂಬುದಾಗಿ ನಿ.ಆರ್.**1** ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ಒಂದು ಕಾರಿನಲ್ಲಿ ಕುಳಿತುಕೊಂಡು ಹೋಗುವಂತಹ ಎಲ್ಲಾ ವ್ಯಕ್ತಿಗಳು **(all the inmates of the car)** ಸಹಾ **third party** ಎಂಬ ವ್ಯಾಪ್ತಿಯ ಅಡಿಯಲ್ಲಿ ಬರುತ್ತಾರೆ ಎಂದರೆ ಸುಳ್ಳು.

6) ಇಂಜಿನ್ ಸಂಖ್ಯೆ **REVTRNO8AXXK13034** ಮತ್ತು ಕೆಎ-**53**-ಎಂಜೆ-**1942** ಸಂಖ್ಯೆಯ ವಾಹನಕ್ಕೆ ವೆಂಕಟೇಶ ರವರು ದಿ:**11.02.2024** ರಂದು **ICICI** ವಿಮಾ ಸಂಸ್ಥೆಯಿಂದ ಒಂದು **Own Damage** ಪಾಲಿಸಿಯನ್ನು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯವು ನನಗೆ ತಿಳಿದಿದೆ ಮತ್ತು ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

7) ನಿ.ಆರ್.**1** ದಾಖಲೆಯಲ್ಲಿ ಇರುವ ಮಾಹಿತಿಯ ಪ್ರಕಾರ ದಿಃ **15.02.2023** ರಿಂದ ದಿಃ **14.02.2025** ರ ವರೆಗೆ **Liability only** ಎಂಬ ಜವಾಬ್ದಾರಿಯು ನಮ್ಮ ಸಂಸ್ಥೆಯ ಮೇಲೆ ಇರುತ್ತದೆ ಎಂದರೆ ಸರಿ. ನಿ.ಆರ್.**1** ದಾಖಲೆಯ ಅಡಿಯಲ್ಲಿ ಮೂರು ವರ್ಷಗಳ ಅವಧಿಗೆ **basic third party premium** ಅನ್ನು ನಾವು ಪಡೆದುಕೊಂಡಿದ್ದೇವೆ ಎಂದರೆ ಸರಿ.

8) ನಿ.ಆರ್.**1** ರ ಅಡಿಯಲ್ಲಿ **PA Cover for owner driver of 15,00,000 (CPA Cover policy period from date 15.02.2022 to date: 14.02.2025)** ಎಂಬ ಅಡಿಯಲ್ಲಿ **853** ರೂಪಾಯಿಗಳನ್ನು **premium** ಪಡೆದುಕೊಳ್ಳಲಾಗಿದೆ ಎಂದರೆ ಸರಿ.

9) **ನ್ಯಾಯಾಲಯದ ಪ್ರಶ್ನೆಃ PA** ಎಂಬ ಪದದ ಅರ್ಥ ಏನು **?**

**ಉತ್ತರ: Personal accident coverage** ಆಗಿದೆ.

10) **ನ್ಯಾಯಾಲಯದ ಪ್ರಶ್ನೆಃ CPA** ಎಂಬ ಪದದ ಅರ್ಥ ಏನು **?**

**ಉತ್ತರ: Coverage of Personal accident** ಆಗಿದೆ.

11) ಅದೇ ರೀತಿ ನಿ.ಆರ್.1 ರಲ್ಲಿ **PA cover for Un-Named persons of 30,000 each (for 5 persons) (IMT-16)** ಎಂಬ ಅಡಿಯಲ್ಲಿ **225** ರೂಪಾಯಿಗಳನ್ನು **premium** ಪಡೆದುಕೊಳ್ಳಲಾಗಿದೆ ಎಂದರೆ ಸರಿ.

12) ನಿ.ಆರ್.1 ರಲ್ಲಿ **own damage policy period** ಎಂಬ ತಲೆ ಬರಹದ ಕೆಳಗೆ ಇರುವಂತಹ ಮಾಹಿತಿಗಳ ಪ್ರಕಾರ ಮೊದಲನೇ ವರ್ಷಕ್ಕೂ ಸಹಾ **Car inmates** ಗಳ ಸಂಬಂಧವಾಗಿ ಯಾವುದೇ ವಿಶೇಷವಾದ **premium** ಪಡೆದುಕೊಂಡಿಲ್ಲ ಎಂದರೆ ಸರಿ.

13) **Own damage** ಪಾಲಿಸಿಯನ್ನು ನಮ್ಮ ವಿಮಾ ಸಂಸ್ಥೆಯಲ್ಲಿಯೇ **renew** ಮಾಡಿಸಿಕೊಳ್ಳದೇ ಇದ್ದರೆ ಆಗ ಕಾರಿನ **inmates** ಗಳ ಜವಾಬ್ದಾರಿಯ ಹಣವನ್ನು ನಾವು ನಮ್ಮ ಸಂಸ್ಥೆಯಿಂದ ಕೊಡಲು ಜವಾಬ್ದಾರರು ಆಗಿರುವುದಿಲ್ಲ ಎಂಬುದಾಗಿ ನಿ.ಆರ್.1 ದಾಖಲೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸುಳ್ಳು.

14) ನಿ.ಆರ್.1 ರಲ್ಲಿ ಪುಟ ಸಂಖ್ಯೆ 1 ರಲ್ಲಿಯೇ **"In the event of non renewal and / or discontinuation of**

**own damage cover with us, coverage available under section 2 – Liability to the third parties will be strictly as per standard form of Liability only policy** ಎಂಬುದಾಗಿ ಬರೆಯಲಾಗಿದೆ"**.**

15**)** ಈಗ ನಾನು ಉಲ್ಲೇಖ ಮಾಡಿದಂತಹ ಸಾಲಿನಲ್ಲಿ **inmates of the car** ಎಂಬ ಪದವು ಇರುವುದಿಲ್ಲ ಎಂದರೆ ಸರಿ**.**

16) ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **4** ರಲ್ಲಿ ನಾನು ಹೇಳಿರುವ ಸಂಗತಿಗಳು ಸುಳ್ಳು ಸಂಗತಿಗಳು ಆಗಿವೆ ಎಂದರೆ ಸುಳ್ಳು**.**

17**)** **own damage** ಪಾಲಿಸಿಯನ್ನು ಮೇಲೆ ಹೇಳಿದ ವಾಹನದ ಮಾಲೀಕರು ಬೇರೆ ವಿಮಾ ಸಂಸ್ಥೆಯಲ್ಲಿ **renew** ಮಾಡಿಸಿದ್ದಾರೆ ಮತ್ತು ಆ ಕಾರಣದಿಂದ ನಮ್ಮ ಸಂಸ್ಥೆಯು ಅರ್ಜಿದಾರರಿಗೆ ಪರಿಹಾರವನ್ನು ಕೊಡಬೇಕಾಗಿದೆ ಮತ್ತು ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು**.**

18) ಪ್ರಶ್ನೆಃ ನಿಮ್ಮ ಪ್ರಕಾರ **inmates** ಅಂದರೆ ಯಾರು **?**

ಉತ್ತರಃ ಆ ಕಾರಿನ ಚಾಲಕನನ್ನು ಹೊರತುಪಡಿಸಿ**,** ಆ ಕಾರಿನಲ್ಲಿ ಇರುವಂತಹ ಪ್ರಯಾಣಿಕರನ್ನು ನಾವು **inmates** ಎಂದು ಕರೆಯುತ್ತೇವೆ**.**

19) ಪ್ರಶ್ನೆಃ ನಿಮ್ಮ ಪ್ರಕಾರ **third parties** ಅಂದರೆ ಯಾರು **?**

ಉತ್ತರಃ ಆ ಕಾರಿನ ಚಾಲಕನನ್ನು ಹೊರತುಪಡಿಸಿ ಮತ್ತು ಆ ಕಾರಿನಲ್ಲಿ ಇರುವಂತಹ ಪ್ರಯಾಣಿಕರನ್ನು ಹೊರತುಪಡಿಸಿ ಆ ಕಾರಿನ ಹೊರಗಡೆ ಯಾವುದೇ ವ್ಯಕ್ತಿಯು ಇದ್ದು ಆ ವ್ಯಕ್ತಿಗೆ ಅಪಘಾತವು ಕಾರಿನಿಂದ ಸಂಭವಿಸಿದರೆ ಅಂತಹ ವ್ಯಕ್ತಿಗಳನ್ನು ನಾವು **third parties** ಎಂದು ಕರೆಯುತ್ತೇವೆ**.**

20) ಐಆರ್ ಡಿ ಎ ನಿಯಮಗಳ ಪ್ರಕಾರ ಒಂದು **insurance policy** ಗೆ ಸಂಬಂಧಪಟ್ಟ ಹಾಗೆ ಹೇಳುವಾಗ **insured** ಮತ್ತು **insurer** ಇಬ್ಬರನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ವ್ಯಕ್ತಿಗಳು **third party** ಎಂಬ ಪದದ ವ್ಯಾಪ್ತಿಯ ಒಳಗಡೆ ಬರುತ್ತಾರೆ ಎಂದರೆ ಸುಳ್ಳು**.**

21) ಪ್ರಯಾಣಿಕರನ್ನು ಕರೆದುಕೊಂಡು ಹೋಗಲು ಬಳಸುವಂತಹ ವಾಣಿಜ್ಯ ಉದ್ದೇಶದ ಕಾರು ಅಂದರೆ ಹಳದಿ ಬಣ್ಣದ ನಾಮಫಲಕವನ್ನು ಹೊಂದಿರುವಂತಹ ಕಾರುಗಳಿಗೆ ನಾವು ನಮ್ಮ ಸಂಸ್ಥೆಯಿಂದ ವಿಮಾ

ಪಾಲಿಸಿಯನ್ನು ನೀಡಿದಾಗ ಆ ಪಾಲಿಸಿಯ ಅಡಿಯಲ್ಲಿ ಆ ಕಾರಿನ ಒಳಗಡೆ ಇರುವಂತಹ ಪ್ರಯಾಣಿಕರು ಅಥವಾ ಇತರೆ ವ್ಯಕ್ತಿಗಳಿಗೆ ಆಗುವಂತಹ ತೊಂದರೆಗಳಿಗೆ ನಾವು ಪರಿಹಾರ ಕೊಡಲು ಜವಾಬ್ದಾರರು ಆಗಿರುತ್ತೇವೋ ಅಥವಾ ಇಲ್ಲವೋ ಎಂದರೆ ಅಂತಹ ವಾಣಿಜ್ಯ ಉದ್ದೇಶದ ಕಾರುಗಳಿಗೆ ನೀಡುವಂತಹ ವಿಮಾ ಪಾಲಿಸಿಯೇ ಬೇರೆ ರೀತಿಯಲ್ಲಿಯೇ ಇರುತ್ತದೆ. ವಾಣಿಜ್ಯ ಉದ್ದೇಶದ ಕಾರುಗಳಿಗೆ ನೀಡುವಂತಹ ಪಾಲಿಸಿಯಲ್ಲಿ **inmates of the car** ಗಳು ಸಹಾ **cover** ಆಗುತ್ತಾರೆ ಆದರೆ ಆ ವಾಣಿಜ್ಯದ ಉದ್ದೇಶದ ಕಾರುಗಳಿಗೆ ನೀಡುವಂತಹ ವಿಮಾ ಪಾಲಿಸಿಗೆ ನಾವು ಪಡೆದುಕೊಳ್ಳುವಂತಹ ಹಣ ಜಾಸ್ತಿ ಇರುತ್ತದೆ.

22) ವಾಣಿಜ್ಯ ಉದ್ದೇಶದ ಕಾರುಗಳಿಗೆ ನೀಡುವಂತಹ **liability only policy** ಯಲ್ಲಿಯೂ ಸಹಾ ನಾವು **whether inmates of the car are also included or not included** ಎಂಬ ವಿವರಗಳನ್ನು ಬರೆದಿರುವುದಿಲ್ಲ ಎಂದರೆ ಸರಿ.

23) ಈ ಪ್ರಕರಣದ ಅರ್ಜಿದಾರರಿಗೆ ನಾವು ನಮ್ಮ ಸಂಸ್ಥೆಯಿಂದ ಪರಿಹಾರದ ಹಣ ಕೊಡಬೇಕಾಗಿದೆ ಮತ್ತು ಆ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನೀಡುತ್ತಿದ್ದೇನೆ ಎಂದರೆ ಸುಳ್ಳು.

24) ವಾಣಿಜ್ಯ ಉದ್ದೇಶದ ಕಾರಿಗೆ ಮತ್ತು ಖಾಸಗಿ ಉಪಯೋಗದ ಕಾರಿಗೆ ನೀಡುವಂತಹ **liability only policy** ಯಲ್ಲಿ ಒಂದೇ ಮಾದರಿಯ ಮಾನದಂಡಗಳು ಇರುತ್ತವೆ ಎಂದರೆ ಸುಳ್ಳು.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.